# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿದ್ದಾಪುರ .

**ಸಿ .ಸಿ. ನಂ. 04/2024**

| ಪಿರ್ಯಾದಿಃ | **ವಿರುದ್ಧ** | ಆರೋಪಿಃ |
|---|---|---|
| ರಾಜ್ಯದ ಪರ<br>ಸಿದ್ದಾಪುರ ಪೋಲೀಸ್ ಠಾಣೆ | | ವೆಂಕಟ್ರಮಣ ತಂದೆ ಮಹಾಬಲೇಶ್ವರ ಗೌಡ<br>ವಯಸ್ಸುಃ **34** ವರ್ಷ, ವೃತ್ತಿಃ ಚಾಲಕ<br>ವಾಸಃ ತಂಡಾಗುಂಡಿ, ಹುಕ್ಕಳ್ಳಿ ತಾಲೂಕು , ಸಿದ್ದಾಪುರ |

## ಆಪಾದನೆ

ಶ್ರೀ ಭರತಚಂದ್ರ ಕೆ ಎಸ್., ಎಲ್‌ಎಲ್.ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು, ಆರೋಪಿತನಾದ ನಿನ್ನನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ .

ಸಿದ್ದಾಪುರ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಸಿದ್ದಾಪುರ ತಾಲೂಕಿನ ಹೇರೂರು ಶಿರಸಿ ರಸ್ತೆಯಲ್ಲಿರುವ ತಟ್ಟಿಕೈ ಕ್ರಾಸ್ ಬಳಿಯ ಆರೋಪಿತನಾದ ನೀನು 08-11-2023 ರಂದು ಬೆಳಿಗ್ಗೆ 07-45 ಗಂಟೆಗೆ ಸುಮಾರಿಗೆ ನಿನ್ನ ಬಾಬ್ತು ಬುಲೆರೋ ಪಿಕ್ ಅಫ್ ವಾಹನ ಸಂಖ್ಯೆಃ ಕೆ ಎ 31/9376 ನ್ನು ಹೇರೂರು ಶಿರಸಿ ರಸ್ತೆಯಲ್ಲಿ ಹೇರೂರು ಕಡೆಯಿಂದ ಶಿರಸಿ ಕಡೆಗೆ ಅತೀವೇಗ ಹಾಗೂ ಜಾಗರೂಕತೆಯಿಂದ ಮಾನವನ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು ತಟ್ಟಿಕೈ ಕ್ರಾಸ್ ಬಳಿ ತನ್ನ ಸೈಡ್ ಬಿಟ್ಟು ನೀರಗಾನ ಕ್ರಾಸ್ ಕಡೆಯಿಂದ ಹೇರೂರ ಕಡೆಗೆ ಪ್ರಕರಣದ ಪಿರ್ಯಾದಿ ಶ್ರೀ ವಸಂತ ಸುಬ್ರಾಯ ಹೆಗಡೆ ಚಲಾಯಿಸಿಕೊಂಡು ಬರುತ್ತಿದ್ದ ಬಝಾರ್ಝ್ ಸಿ ಟಿ 100 ಮೋಟಾರು ಸೈಕಲ್ ನಂ ಕೆ ಎ 31 ಇಸಿ 4920 ನೇದಕ್ಕೆ ಎದುರಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಾರೆಂದು ಆಪಾದಿಸಲಾಗಿದೆ.

ಎರಡನೇಯದಾಗಿ ಅದೇ ದಿನ , ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಸದ್ರಿ ಅಪಘಾತದಿಂದ ಪಿರ್ಯಾದಿಗೆ ಸಣ್ಣಪುಟ್ಟ ಗಾಯಗಳಾಗಿದ್ದು , ಮೋಟಾರ್ ಸೈಕಲ್ ನ ಹಿಂಬದಿ

ಸವಾರರಾದ ಸುಬ್ರಾಯ ರಾಮಯ್ಯ ಹೆಗಡೆ ಇವರಿಗೆ ಹಣೆಗೆ ರಕ್ತಗಾಯ, ಗಲ್ಲದ ಕೆಳಭಾಗ ತೆರಚಿದ ಗಾಯ ಬಲಗೈ ಮೊಣಕೈ ರಕ್ತ ಗಾಯ , ಬಲಗಾಲಿನ ಮೊಣಕಾಲಿಗೆ ತೆರಚಿದ ಗಾಯ , ಬಲಗಾಲಿನ ಪಾದದ ಬಳಿ ರಕ್ತ ಗಾಯ, ತಲೆಯ ಹಿಂಭಾಗಕ್ಕೆ ಮಾರಣಾಂತಿಕ ಗಾಯವುಂಟಾಗಿ ಮರಣ ಹೊಂದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದು ಅದು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಾರೆಂದು ಆಪಾದಿಸಲಾಗಿದೆ.

ಮೂರನೇಯದಾಗಿ ಅದೇ ದಿನ , ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತನಾದ ನೀನು ಅಪಘಾತದ ಬಳಿಕ ಗಾಯಾಳುಗಳನ್ನು ಉಪಚರಿಸದೇ, ವಾಹನವನ್ನು ನಿಲ್ಲಿಸದೇ ಘಟನಾ ಸ್ಥಳದಿಂದ ಓಡಿ ಹೋಗುವ ಮೂಲಕ ಮೋಟಾರು ವಾಹನ ಕಾಯ್ದೆ 1988 ಕಲಂ 187 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದು ಅದು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಾರೆಂದು ಆಪಾದಿಸಲಾಗಿದೆ.

ಪ್ರಶ್ನೆಃ ಈ ಮೇಲೆ ಓದಿ ಹೇಳಲಾದ ಆಪಾದನೆಯು ನಿಮಗೆ ತಿಳಿಯಿತೇ?
ಉತ್ತರಃ ಆರೋಪಿಃ

ಪ್ರಶ್ನೆಃ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ವಿಚಾರಣೆ ಬಯಸುವಿರೋ?
ಉತ್ತರಃ ಆರೋಪಿಃ
(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ಅದೇ ರೀತಿ ದಾಖಲಿಸಿಕೊಳ್ಳಲಾಯಿತು ).

ದಿನಾಂಕಃ 08-05-2024

ಪ್ರ.ದ.ನ್ಯಾ. ದಂಡಾಧಿಕಾರಿ,
ಸಿದ್ದಾಪುರ .